# ಕರ್ನಾಟಕ ಸರ್ಕಾರ

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

## ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕೊಂಡಜ್ಜಿ.

## ಹರಿಹರ ತಾ॥ ದಾವಣಗೆರೆ ಜಿ॥ – 577589.



| | |
|---|---|
| ಪ್ರಾರಂಭವಾದ ವರ್ಷಮತ್ತು ದಿನಾಂಕ : | 2006–2007 (30–06–2006) |
| ಸರ್ಕಾರಿ ಆದೇಶ ಸಂಖ್ಯೆ – | ಸಕಇ: 78 ಅಸಂಯೋ:2006 |
| ಕಟ್ಟಡದ ಸ್ವರೂಪ & ವಿಸ್ತೀರ್ಣ | ಸ್ವಂತ 38400 ಚ ಅಡಿ |
| ಅಕ್ಷಾಂಶ–ರೇಖಾಂಶ | 14.567° – 75.871° |
| ಮಂಜೂರಾತಿಯಾದ ವಿದ್ಯಾರ್ಥಿಗಳ ಸಂಖ್ಯೆ | 300 |
| ಪ್ರಸ್ತುತ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 276 |
| ತರಗತಿ | 6ನೇ ರಿಂದ 10ನೇ ತರಗತಿ |
| ಮಾಧ್ಯಮ | ಆಂಗ್ಲ ಮಾಧ್ಯಮ |

### : ವಿವರಣೆ :

ಕರ್ನಾಟಕ ರಾಜ್ಯದ ಮಧ್ಯ ಕರ್ನಾಟಕದ ಪ್ರಮುಖ ಜಿಲ್ಲೆಯಾದ ಹಾಗೂ ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಪ್ರಖ್ಯಾತಿ ಪಡೆದ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿಗೆ ಸೇರಿದ ಹಳೇಹರ್ಲಾಪುರದ ಬಾಡಿಗೆ ಕಟ್ಟಡದಲ್ಲಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ದಿನಾಂಕ 30–06–2006 ರಂದು ಪ್ರಾರಂಭವಾಗಿದೆ.

ಪ್ರಸ್ತುತ ಕೊಂಡಜ್ಜಿ ಗ್ರಾಮವು ದಾವಣಗೆರೆ ನಗರದಿಂದ ಸುಮಾರು 15 ಕಿ.ಮೀ ದೂರದಲ್ಲಿರುವ ಈ ಪ್ರದೇಶವು ದಕ್ಷಿಣ ಭಾರತದ ಸ್ಕೌಟ್ಸ್ ಹಾಗೂ ಗೈಡ್ಸ್ ಕವಾಯತು ಶಿಬಿರವಾಗಿದೆ, ಈ ಹಿಂದಿನ ಸ್ಕೌಟ್ಸ್ ಹಾಗೂ ಗೈಡ್ಸ್ ಕಮಿಷನರ್ ಆಗಿದ್ದ ಕೊಂಡಜ್ಜಿ ಬಸಪ್ಪನವರು ನಮ್ಮ ರಾಜ್ಯದ ಅತ್ಯಂತ ಹಿರಿಯ ರಾಜಕಾರಣಿಯಾಗಿದ್ದು ಅವರು ಸ್ಕೌಟ್ಸ್ ಹಾಗೂ ಗೈಡ್ಸ್ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿ ಅವರ ಸ್ಮರಣಾರ್ಥಕವಾಗಿ "ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಹಾಗೂ ಗೈಡ್ಸ್ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದೆ" ಈ ತರಬೇತಿ ಕೇಂದ್ರದಿಂದ 1 ಕಿ.ಮೀ ಅಂತರದಲ್ಲಿ ನಮ್ಮ ಶಾಲೆಯು ನಿರ್ಮಾಣಗೊಂಡಿದೆ, ಚಿಕ್ಕದಾದ ಬೆಟ್ಟ ಗುಡ್ಡ ಮತ್ತು ಕೆರೆ ಕೊಳ್ಳಗಳಿಂದ ಸುತ್ತುವರೆದ ನೈಸರ್ಗಿಕ ಸೌಂದರ್ಯದ ಮಡಿಲಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಏಳಿಗೆಯ ಧ್ಯೇಯೋದ್ದೇಶಗಳ ಸಾಧನೆಗಾಗಿ ಶಾಲೆಯನ್ನು ಕೊಂಡಜ್ಜಿ ಗ್ರಾಮದ ಹತ್ತಿರ 10.00ಎಕರೆ ವಿಸ್ತೀರ್ಣ ಹೊಂದಿರುವ ವಿಶಾಲವಾದ ಸ್ವಂತ ಕಟ್ಟಡದಲ್ಲಿ ಪ್ರಾರಂಭಿಸಲಾಯಿತು. ಈ ವಸತಿ ಶಾಲೆಯಲ್ಲಿ ಸುಸಜ್ಜಿತವಾದ ಶಾಲಾ ಸಂಕೀರ್ಣ, ಬಾಲಕರ ಮತ್ತು ಬಾಲಕಿಯರ ವಸತಿ ನಿಲಯ, ಭೋಜನಾಲಯ, ಮೌಲಾನಾ ಆಜಾದ್ ಬಹುಉದ್ದೇಶಿತ ಸಭಾಂಗಣ, ಗುಬ್ಬಿ ವೀರಣ್ಣ ರಂಗ ಮಂದಿರ, ಭೋಧಕ & ಭೋಧಕೇತರ ಸಿಬ್ಬಂದಿಯವರಿಗೆ ಸುಂದರವಾದ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ.

ಒಂದು ಮಂದಿರ ಕಟ್ಟಿಸಿದರೆ ಸಾವಿರ ಭಿಕ್ಷುಕರು ಹುಟ್ಟಿಕೊಳ್ಳುತ್ತಾರೆ, ಒಂದು ಗ್ರಂಥಾಲಯ ನಿರ್ಮಿಸಿದರೆ ಲಕ್ಷಾಂತರ ವಿದ್ವಾಂಸರು ಹುಟ್ಟಿಕೊಳ್ಳುತ್ತಾರೆ ಎಂಬ ಡಾ॥ ಬಿ. ಆರ್. ಅಂಬೇಡ್ಕರ್ ರವರ ವೈಚಾರಿಕ ದೃಷ್ಟಿಕೋನದಂತೆ ನಮ್ಮ ಶಾಲೆಯಲ್ಲಿಯೂ ಸಹ ಅನೇಕ ವಿದ್ವಾಂಸರುಗಳ ಜೀವನ ಚರಿತ್ರೆಗಳನ್ನೊಳಗೊಂಡ ಪುಸ್ತಕಗಳು, ಗ್ರಂಥಗಳು ಅಲ್ಲದೆ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನ ವೃದ್ದಿಸುವ ಅನೇಕ ಪುಸ್ತಕಗಳನ್ನು ನಮ್ಮ ಶಾಲೆಯ ಗ್ರಂಥಾಲಯ ಹೊಂದಿದ್ದು, ವಿದ್ಯಾರ್ಥಿಗಳ ಬೌದ್ಧಿಕಮಟ್ಟ ಹೆಚ್ಚಿಸಲು ಪ್ರೇರಣೆ ನೀಡಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾಗುವಂತಹ ಪ್ರತ್ಯೇಕವಾದ ಸ್ಮಾರ್ಟ್ ಕ್ಲಾಸ್, ಪ್ರತ್ಯೇಕವಾದ ಕಂಪ್ಯೂಟರ್ ತರಗತಿಗಳ ವ್ಯವಸ್ಥೆ ಮಾಡಲಾಗಿದೆ. ಹಾಗೆಯೇ ವಸತಿ ಶಾಲೆಯು ಉತ್ತಮ ಗ್ರಂಥಾಲಯ, ಹೊರಾಂಗಣ ಜಿಮ್, ಪ್ರಯೋಗಾಲಯ, ಆಟದ ಮೈದಾನ, ಶಾಲಾ ಕೈ ತೋಟ, ಹೀಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ವಸತಿ ಶಾಲೆಯು ನುರಿತ ಶಿಕ್ಷಕರನ್ನು ಹೊಂದಿದ್ದು, ಪಠ್ಯ ವಿಷಯಗಳ ಜೊತೆ ಪಠ್ಯೇತರ ವಿಷಯಗಳಲ್ಲೂ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುವಂತೆ ಮಾಡುವ ಮೂಲಕ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ.